

# ಚರಿತ್ರೆಯ ಬೇರು ವರ್ತಮಾನದ ಹಸಿರು

# ಓಹೋ ಓಸ್ಲೋ

ಆಧುನಿಕತೆಯನ್ನು ಮೈಮೇಲೆ ಭರಿಸಿಕೊಂಡು, ಅದರ ಭಾರವನ್ನು ಹೊರಲಾರದೆ ತೊಳಲುತ್ತಿರುವ ಮಹಾನಗರಗಳ ನಡುವೆ, ನಾರ್ವೆ ದೇಶದ ರಾಜಧಾನಿ ಓಸ್ಲೋ ವಿಭಿನ್ನವಾಗಿ ಕಾಣಿಸುತ್ತದೆ. ಚರಿತ್ರೆಯ ಬೇರನ್ನೂ ವರ್ತಮಾನದ ಚಿಗುರನ್ನೂ ಹದವಾಗಿ ಬೆರೆಸಿದಂತಿರುವ ಈ ನಗರದಲ್ಲಿ ಅಡ್ಡಾಡುವುದೇ ಒಂದು ವಿಶಿಷ್ಟ ಅನುಭವ.

■ ಸುಚೇತಾ ಕೆ.ಎನ್.

ಉತ್ತರ ಧ್ರುವಕ್ಕೆ ಸಮೀಪದಲ್ಲಿರುವ ನಾರ್ವೆ ಎಂಬ ಪುಟ್ಟ ದೇಶ ಪ್ರಾಕೃತಿಕ ಸೌಂದರ್ಯದ ಖನಿ. ಮುಗಿಲ ಮುಟ್ಟುವ ಪರ್ವತ ಶಿಖರಗಳು, ಅವುಗಳ ಆಳದಲ್ಲೆಲ್ಲೋ ಹರಿಯುವ ನದಿ, ಸುರಿವ ಹಿಮ, ಜಲಧಾರೆಗಳು, ಹಸಿರ ಕಾನನ, ತಿಳಿನೀಲಿ ಸರೋವರ – ಒಂದೇ ಎರಡೇ! ಒಂದು ಕಾಲದಲ್ಲಿ ಬರ್ಬರತೆಗೆ ಹೆಸರಾಗಿದ್ದ ವೈಕಿಂಗ್ಸ್‌ಗಳ ತವರು ನೆಲವಿದು. ಈಗ ಮುಂದುವರಿದ ಶ್ರೀಮಂತ ದೇಶಗಳಲ್ಲಿ ಒಂದಾಗಿದೆ.

ನಾರ್ವೆ ದೇಶದ ರಾಜಧಾನಿ ಓಸ್ಲೋ ಮಹಾನಗರವೇನಲ್ಲ. ಗಗನಚುಂಬಿ ಕಟ್ಟಡಗಳೂ ಇಲ್ಲಿಲ್ಲ. ಆದರೆ ಓಸ್ಲೋದ ಬೀದಿಗಳಲ್ಲಿ ನಡೆಯುತ್ತಿದ್ದರೆ ಅಲ್ಲಿನ ಸೌಂದರ್ಯದ ಅರಿವಾಗುತ್ತದೆ. ಅಗಲವಾದ ರಸ್ತೆಗಳು, ಅಲ್ಲಲ್ಲಿ ಮರ ಗಿಡಗಳು, ಸ್ವಲ್ಪ ದೂರ ನಡೆಯುತ್ತಿದ್ದಂತೆ ಎದುರಾಗುವ ಉದ್ಯಾನವನಗಳು, ತಿರುವಿಗೊಂದೆಂಬಂತೆ ಕಾಣುವ ಕಲ್ಲಿನ ಪ್ರತಿಮೆಗಳು, ನೂರಾರು ವರ್ಷಗಳಷ್ಟು ಹಳೆಯ ಕಟ್ಟಡಗಳು ಇವೆಲ್ಲವುಗಳ ಜೊತೆಗೆ ಸಾಮಾನ್ಯವಾಗಿ ನಮ್ಮ ನಗರ ಪ್ರದೇಶಗಳಲ್ಲಿ ಕಂಡು ಬರುವ ಕಸ, ಕೊಳಚೆ ಯಾವುದೂ ಇಲ್ಲದೆ ಮನಸ್ಸು ಉಲ್ಲಾಸಭರಿತವಾಗುತ್ತದೆ.

ಪುಟ್ಟ ನಗರವೆಂದಾಕ್ಷಣ ಪ್ರವಾಸಿಗರಿಗೇನೂ ಬರವಿಲ್ಲ. ಕೋಟೆಯ ಅವಶೇಷಗಳು, ಅರಮನೆ, ಫಿಯೋರ್ಡ್, ವಸ್ತು ಸಂಗ್ರಹಾಲಯಗಳಿಂದ ತುಂಬಿದೆ ಈ ಜಾಗ. ದೇಶದ ಉದ್ದಗಲಕ್ಕೂ ಹರಡಿರುವ ನೈಸರ್ಗಿಕ ಸೌಂದರ್ಯವನ್ನು ಸವಿಯ ಹೊರಟವರು ಓಸ್ಲೋವಿನಿಂದಲೇ ತಮ್ಮ ಪ್ರಯಾಣ ಪ್ರಾರಂಭಿಸುತ್ತಾರೆ. ಕೆಲವೊಮ್ಮೆ ಸಮಯದ ಅಭಾವವಿದ್ದಲ್ಲಿ ಇಡಿಯ ದೇಶವನ್ನು ಪ್ರತಿನಿಧಿಸುವ ರಾಜಧಾನಿಯನ್ನು ನೋಡಿ ಹಿಂದಿರುಗುತ್ತಾರೆ.

## ನೋಡಲು ಏನೇನಿವೆ?

ಸೆಂಟ್ರಲ್ ಸ್ಟೇಷನ್‌ನಿಂದ ಹೊರ ದಾಟಿದ ಕೂಡಲೇ ವಿಶಾಲವಾಗಿ ಹರಡಿರುವ ಓಸ್ಲೋ ಫಿಯೋರ್ಡ್, ಮತ್ತದರ ದಡದಲ್ಲಿ ಭವ್ಯವಾಗಿ ನಿಂತಿರುವ ಶ್ವೇತವರ್ಣದ ಒಪೆರಾ ಹೌಸ್ ಕಣ್ಸೆಳೆಯುತ್ತದೆ. ಸಮುದ್ರದ ನೀರು ಒಳನುಗ್ಗಿ ಉಂಟಾಗುವ ಹಿನ್ನೀರಿನ ಪ್ರದೇಶವನ್ನು 'ಫಿಯೋರ್ಡ್' ಎಂದು ಕರೆಯುತ್ತಾರೆ. ಸಂಗೀತ, ನೃತ್ಯ, ನಾಟಕಗಳಿಗೆ ವೇದಿಕೆಯೊದಗಿಸುವ ಒಪೆರಾ ಹೌಸ್‌ನ ಸುತ್ತಲೂ ಸಂಜೆಯ ಹೊತ್ತು ಒಂದು ಪ್ರದಕ್ಷಿಣೆ ಹಾಕಿ, ಐಸ್‌ಕ್ರೀಮ್ ತಿಂದು, ಬಿಸಿ ಕಾಫಿ ಹಿಡಿದು ಫಿಯೋರ್ಡ್‌ನ ಅಂಚಿನಲ್ಲಿ ಓಡಾಡುವ ಅನುಭವ ಸ್ಮರಣೀಯ.

ಮುಂದೆ ನೀರಿಗೆ ಅಭಿಮುಖವಾಗಿ ಸಣ್ಣ ಗುಡ್ಡದ ಮೇಲೆ ಶತಮಾನಗಳ ನೆನಪನ್ನು ಹೊತ್ತ ಅಖೆರ್ಶ್ಹುಸ್ ಕೋಟೆಯ ಅವಶೇಷಗಳಿವೆ.

